

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02-10-2020** ರಂದು ನೀಡಿದ **ಜುಮುಅ ಖುತ್‌ಬದ** ಸಾರಾಂಶ)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ತಿಲಾವತ್ ಮಾಡಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಇಂದು ಬದರೀ ಸಹಾಬಿಯರಲ್ಲಿ ಹಝ್ರತ್ ಅಬೂ ಉಬೈದ ಬಿನ್ ಜರಾಹ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸಲಾಗುವುದು. ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರ ಹೆಸರು ಆಮಿರ್ ಬಿನ್ ಅಬ್ದುಲ್ಲಾಹ್ ಎಂದಾಗಿತ್ತು. ಅವರ ತಂದೆಯ ಹೆಸರು ಅಬ್ದುಲ್ಲಾಹ್ ಬಿನ್ ಜರಾಹ್ ಎಂದಾಗಿತ್ತು. ಹಝ್ರತ್ ಅಬೂ ಉಬೈದ(ರ) ತನ್ನ ಉಪನಾಮದೊಂದಿಗೆ ಹೆಚ್ಚಿನ ಪ್ರಸಿದ್ಧಿಯನ್ನು ಪಡೆದಿದ್ದರು. ಆದರೆ ಅವರ ವಂಶಾವಳಿಯನ್ನು ಅವರ ತಾತರಾದ ಜರಾಹ್‌ರೊಂದಿಗೆ ಜೋಡಿಸಿ ಹೇಳಲಾಗುತ್ತದೆ. ಅವರ ತಾಯಿಯ ಹೆಸರು ಅಮೀಮ ಬಿನ್ತ್ ಗ಼ನಮ್ ಎಂದಾಗಿತ್ತು. ಅವರು ಖುರೈಶಿ ಗೋತ್ರದ ಒಂದು ಕುಟುಂಬವಾದ ಬನೂ ಹಾರಿಸ್ ಬಿನ್ ಫಹರ್‌ನೊಂದಿಗೆ ಸಂಬಂಧ ಹೊಂದಿದ್ದರು. ಹಝ್ರತ್ ಅಬೂ ಉಬೈದ ಉದ್ದ ಮೈಕಟ್ಟಿನ ಸಪೂರ ದೇಹದ ವ್ಯಕ್ತಿಯಾಗಿದ್ದರು. ಮುಖದಲ್ಲಿಯೂ ಮಾಂಸ ಕಮ್ಮಿಯಾಗಿತ್ತು. ಉಹದ್ ಯುದ್ಧದ ವೇಳೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖದಲ್ಲಿ ಸಿಲುಕಿಕೊಂಡಿದ್ದ ಶಿರಸ್ತ್ರಾಣದ ವರ್ತುಲವನ್ನು ಕಿತ್ತೆಗೆಯುವಾಗ ಹಝ್ರತ್ ಅಬೂ ಉಬೈದರ ಮುಂದಿನ ಎರಡು ಹಲ್ಲುಗಳು ಮುರಿದು ಹೋಗಿದ್ದುವು. ಅವರಿಗೆ ಹೆಚ್ಚು ದಟ್ಟವಾದ ಗಡ್ಡವಿರಲಿಲ್ಲ. ಗಡ್ಡಕ್ಕೆ ಬಣ್ಣ ಹಚ್ಚುತ್ತಿದ್ದರು. ಹಝ್ರತ್ ಅಬೂ ಉಬೈದ ಬಿನ್ ಜರಾಹ್ ಹಲವು ವಿವಾಹಗಳನ್ನು ಮಾಡಿದ್ದರು. ಆದರೆ ಕೇವಲ ಎರಡು ಪತ್ನಿಯರಿಂದ ಅವರಿಗೆ ಮಕ್ಕಳಾಗಿದ್ದುವು. ಅವರಿಗೆ ಯಝೀದ್ ಮತ್ತು ಉಮೈರ್ ಎಂಬ ಎರಡು ಗಂಡು ಮಕ್ಕಳಿದ್ದರು.

ಅಶರ ಮುಬಶ್ಶಿರ, ಎಂದರೆ ಸ್ವರ್ಗಕ್ಕೆ ಅರ್ಹರು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಜೀವಿತಕಾಲದಲ್ಲಿ ಸುವಾರ್ತೆ ನೀಡಿದ ಹತ್ತು ಸಹಾಬಿವರ್ಯರಲ್ಲಿ ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಒಳಪಡುತ್ತಾರೆ. ಖುರೈಶ್‌ನ ಗೌರವಾನ್ವಿತ, ಸದ್ಗುಣ ಸಂಪನ್ನ ಮತ್ತು ಸುಶೀಲರಾದ ಜನರಲ್ಲಿ ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಗಣಿಸಲ್ಪಡುತ್ತಿದ್ದರು. ಅವರು ಹಝ್ರತ್ ಅಬೂಬಕ್ಕರರ(ರ) ತಬ್ಲೀಗ್ ಮೂಲಕ ಮುಸ್ಲಿಮರಾಗಿದ್ದರು. ಇದು ದಾರುಲ್ ಅರ್ಕಮ್‌ನಲ್ಲಿ ಮುಸ್ಲಿಮರು ಅಭಯ ಪಡೆದಿದ್ದ ಕಾಲಕ್ಕೂ ಮುಂಚಿನ ಸಂಗತಿಯಾಗಿದೆ. ಹಝ್ರತ್ ಅಬೂ ಉಬೈದ ಬಿನ್ ಜರಾಹ್ ಮುಸ್ಲಿಮರಾದ ಒಂಬತ್ತನೇ ವ್ಯಕ್ತಿಯಾಗಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾಗಿ ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಪ್ರತಿಯೊಂದು ಸಮುದಾಯದಲ್ಲಿ ಒಬ್ಬ ಅಮೀನ್ (ಅತ್ಯಂತ ವಿಶ್ವಸ್ತ ವ್ಯಕ್ತಿ) ಇರುತ್ತಾರೆ. ನನ್ನ ಸಮುದಾಯದ ಅಮೀನ್ ಹಝ್ರತ್ ಅಬೂ ಉಬೈದ ಆಗಿರುವರು. ಒಂದು ಸಂದರ್ಭದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರ ಕೈಯನ್ನು ಹಿಡಿದು ಹೀಗೆ ಹೇಳಿದರು: **ಹಾಧಾ ಅಮೀನುನ್ ಹಾಧಿಹಿಲ್ ಉಮ್ಮತಿ**. ಇವರು ಈ ಸಮುದಾಯದ ವಿಶ್ವಸ್ತ ವ್ಯಕ್ತಿಯಾಗಿರುವರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಶಂಸಿಸುತ್ತಾ ಹೀಗೆ ಹೇಳಿದ್ದಾಗಿ ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಅಬೂಬಕ್ಕರ್, ಉಮರ್, ಅಬೂ ಉಬೈದ ಬಿನ್ ಜರಾಹ್, ಉಸೈದ್ ಬಿನ್ ಹಝೀರ್, ಸಾಬಿತ್ ಬಿನ್ ಖೈಸ್ ಬಿನ್ ಶುಮಾಸ್, ಮುಆದ್ ಬಿನ್ ಜಬಲ್, ಮುಆಧ್ ಬಿನ್ ಅಮ್ರ್ ಬಿನ್ ಜಮೂಹ್ ಎಷ್ಟು ಒಳ್ಳೆಯ ವ್ಯಕ್ತಿಗಳಾಗಿರುವರು!

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಉತ್ತರಾಧಿಕಾರಿಯನ್ನಾಗಿ ಯಾರನ್ನಾದರೂ ಮಾಡುವರಾದರೆ, ಯಾರನ್ನು ಮಾಡುತ್ತಿದ್ದರು ಎಂದು ಒಂದು ಸಲ ಹಝ್ರತ್ ಆಯಿಶಾರೊಡನೆ(ರ) ಕೇಳಲಾಯಿತು. ಹಝ್ರತ್ ಅಬೂಬಕ್ಕರ್‌ರನ್ನು(ರ) ಎಂದು ಅವರು ಉತ್ತರಿಸಿದರು. ಅನಂತರ ಯಾರನ್ನು ಎಂದು ಜನರು ಕೇಳಿದರು. ಹಝ್ರತ್ ಉಮರ್‌ರನ್ನು ಎಂದು ಅವರು ಉತ್ತರಿಸಿದರು. ಅನಂತರ ಯಾರನ್ನು ಎಂದು ಜನರು ಕೇಳಿದರು. ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರನ್ನು ಎಂದು ಹಝ್ರತ್ ಆಯಿಶಾ(ರ) ಹೇಳಿದರು. ಹಝ್ರತ್ ಆಯಿಶಾ(ರ)ರ ದೃಷ್ಟಿಯಲ್ಲಿ ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರ ಆದರಣೀಯ ಸ್ಥಾನ ಎಷ್ಟಿತ್ತೆಂದರೆ, ಅವರ ಪ್ರಕಾರ ಹಝ್ರತ್ ಉಮರ್(ರ) ನಿಧನರಾದಾಗ ಹಝ್ರತ್ ಅಬೂ ಉಬೈದ ಜೀವಂತವಾಗಿ ಇರುತ್ತಿದ್ದರೆ, ಅವರೇ ಖಲೀಫರಾಗುತ್ತಿದ್ದರು.

ಇತಿಯೋಪಿಯಾಗೆ ವಲಸೆ ಹೋದ ಜನರಲ್ಲಿ ಸಹ ಹಝ್ರತ್ ಅಬೂ ಉಬೈದ(ರ) ಇದ್ದರು. ಅಬೂ ಉಬೈದ ಮದೀನಗೆ ಹಿಜ್‌ರತ್ ಮಾಡಿ ಬಂದಾಗ, ಅವರನ್ನು ನೋಡಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖ ಸಂತೋಷದಿಂದ ಹೊಳೆಯುತ್ತಿತ್ತು. ಹಝ್ರತ್ ಉಮರ್(ರ) ಮುಂದಕ್ಕೆ ಧಾವಿಸಿ ಹಝ್ರತ್ ಅಬೂ ಉಬೈದರನ್ನು ಆಲಿಂಗಿಸಿದರು.

ಹಝ್ರತ್ ಅಬೂ ಉಬೈದ ಬಿನ್ ಜರಾಹ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಬದ್ರ್, ಉಹದ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು. ಬದ್ರ್ ಯುದ್ಧದ ವೇಳೆ ಹಝ್ರತ್ ಅಬೂ ಉಬೈದರಿಗೆ 41 ವಯಸ್ಸಾಗಿತ್ತು. ಬದ್ರ್ ಯುದ್ಧದ ವೇಳೆ ಹಝ್ರತ್ ಉಬೈದ ಬಿನ್ ಜರಾಹ್ ಮುಸ್ಲಿಮರ

ಪರವಾಗಿ ಯುದ್ಧ ಮೈದಾನಕ್ಕೆ ಬಂದಾಗ, ಅವರ ತಂದೆ ಅಬ್ದುಲ್ಲಾಹ್ ಸತ್ಯನಿಷೇಧಿಗಳ ಕಡೆಯಿಂದ ಯುದ್ಧ ಮೈದಾನಕ್ಕೆ ಬಂದಿದ್ದರು. ತಂದೆ ಮತ್ತು ಮಗನು ಮುಖಾಮುಖಿಯಾದಾಗ, ದೇವನ ಏಕತ್ವದ ಆವೇಶ ರಕ್ತ ಸಂಬಂಧದ ಮೇಲೆ ಮೇಲುಗೈ ಸಾಧಿಸಿತು. ಅಬ್ದುಲ್ಲಾಹ್ ತನ್ನ ಮಗನಾದ ಹಝ್ರತ್ ಉಬೈದ ಬಿನ್ ಜರಾಹ್‌ರ(ರ) ಕೈಯಿಂದಲೇ ಕೊಲ್ಲಲ್ಪಟ್ಟರು.

ಉಹದ್ ಯುದ್ಧದ ವೇಳೆ ಜನರು ಚದುರಿ ಹೋದಾಗ, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸ್ಥಿರಚಿತ್ತರಾಗಿ ನಿಂತಿದ್ದ ಕೆಲವು ವ್ಯಕ್ತಿಗಳಲ್ಲಿ ಹಝ್ರತ್ ಅಬೂ ಉಬೈದ ರಝಿಯಲ್ಲಾಹು ಅನ್‌ಹು ಸಹ ಒಳಪಡುತ್ತಾರೆ. ಹಿಜರಿ ವರ್ಷ 6ರ ದುಲ್‌ಖಅದ್ ತಿಂಗಳಲ್ಲಿ ನಡೆದ ಹುದೈಬಿಯಾ ಒಪ್ಪಂದದ ಸಂದರ್ಭದಲ್ಲಿ ಸಂಧಿ ಪತ್ರ ಬರೆಯಲಾದಾಗ, ಒಪ್ಪಂದದ ಎರಡು ನಕಲು ಪ್ರತಿಗಳನ್ನು ತಯಾರಿಸಲಾಗಿದ್ದುವು. ಉಭಯ ಪಕ್ಷಗಳಿಂದ ಕೆಲವು ಆದರಣೀಯ ವ್ಯಕ್ತಿಗಳು ಸಾಕ್ಷಿಯೆಂಬ ನೆಲೆಯಲ್ಲಿ ಸಂಧಿ ಪತ್ರದಲ್ಲಿ ಸಹಿ ಹಾಕಿದ್ದರು. ಮುಸ್ಲಿಮರ ಕಡೆಯಿಂದ ಸಹಿ ಹಾಕಿದವರಲ್ಲಿ ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಸೇರುತ್ತಾರೆ.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರನ್ನು ಹಲವು ಯುದ್ಧಗಳಿಗೆ ಕಳುಹಿಸಿದ್ದರು. ಅವುಗಳಲ್ಲಿ ಒಂದು ಧಾತುಸ್ಸಲಾಸಿಲ್ ಯುದ್ಧವಾಗಿತ್ತು. ಹಝ್ರತ್ ಅಮ್ರ್ ಬಿನ್ ಆಸ್ ಹೆಚ್ಚುವರಿ ಸೇನೆ ಕಳುಹಿಸಬೇಕೆಂದು ವಿನಂತಿಸಿದಾಗ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಹಾಜಿರ್ ಮತ್ತು ಅನ್ಸಾರ್‌ಗಳನ್ನೊಳಗೊಂಡ ಒಂದು ಸಂಘವನ್ನು ಹಝ್ರತ್ ಅಬೂ ಉಬೈದ ರಝಿಯಲ್ಲಾಹು ಅನ್‌ಹುರ ನಾಯಕತ್ವದಲ್ಲಿ ಅವರ ನೆರವಿಗಾಗಿ ರವಾನಿಸಿದ್ದರು. ಅಮ್ರ್ ರಝಿಯಲ್ಲಾಹು ಅನ್‌ಹುರ ಬಳಿಗೆ ಹೋಗಿ ಸೇರಲು ಮತ್ತು ಭಿನ್ನತೆ ಉಂಟುಮಾಡದಿರಲು ಸಹ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿರ್ದೇಶಿಸಿದ್ದರು. ಹಝ್ರತ್ ಅಬೂ ಉಬೈದರ ಸ್ಥಾನದ ದೃಷ್ಟಿಯಲ್ಲಿ ನೋಡುವುದಾದರೆ, ಅವರು ನಾಯಕತ್ವಕ್ಕೆ ಅರ್ಹರಾಗಿದ್ದರು. ಆದರೆ ನಾಯಕತ್ವವನ್ನು ನಾನೇ ವಹಿಸುವೆನು ಎಂದು ಹಝ್ರತ್ ಅಮ್ರ್ ಬಿನ್ ಆಸ್ ಒತ್ತಾಯ ಪೂರ್ವಕವಾಗಿ ಹೇಳಿದ್ದ ಕಾರಣದಿಂದ, ಹಝ್ರತ್ ಅಬೂ ಉಬೈದ(ರ) ಸಂತೋಷದಿಂದ ಹಝ್ರತ್ ಅಮ್ರ್ ಬಿನ್ ಆಸ್‌ರ ನೇತೃತ್ವವನ್ನು ಅಂಗೀಕರಿಸಿ ಅವರ ನಾಯಕತ್ವದ ಅಡಿಯಲ್ಲಿ ಅತ್ಯಂತ ಶೌರ್ಯದಿಂದ ಶತ್ರುಗಳ ವಿರುದ್ಧ ಹೋರಾಡಿ ಶತ್ರುಗಳನ್ನು ಸೋಲಿಸಿದರು. ವಿಜಯದ ನಂತರ ಮದೀನಕ್ಕೆ ಬಂದಾಗ, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಬೈದರ ಅನುಸರಣೆಯ ಕುರಿತು ತಿಳಿದಾಗ, **ರಹಿಮಲ್ಲಾಹು ಅಬಾ ಉಬೈದ** ಎಂದು ಹೇಳಿದರು. ಎಂದರೆ, ಅವರು ಅನುಸರಣೆಯ ಉನ್ನತ ಮಟ್ಟವನ್ನು ಸ್ಥಾಪಿಸಿರುವರು, ಆದ್ದರಿಂದ ಅವರ ಮೇಲೆ ಅಲ್ಲಾಹನ ಕಾರುಣ್ಯ ವರ್ಷಿಸಲಿ.

ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬರು ಸೈಫುಲ್ ಬಹ್ರ್ ಯುದ್ಧಕ್ಕೆ ಸಂಬಂಧಿಸಿ ಬರೆಯುತ್ತಾರೆ: ಹಝ್ರತ್ ಅಬೂ ಉಬೈದ(ರ) ಅದರ ಅಮೀರ್ ಆಗಿದ್ದರು. ಇಬ್ನು ಸಅದ್‌ರು **'ಸರಿಯತುಲ್‌ಖಬತ್'** ಎಂಬ ಶೀರ್ಷಿಕೆಯ ಅಡಿಯಲ್ಲಿ ಇದರ ಬಗ್ಗೆ ಸಂಕ್ಷೇಪವಾಗಿ ಪ್ರಸ್ತಾಪಿಸಿದ್ದಾರೆ. **'ಖಬತ್'** ಎಂದರೆ, ಮರದ ಎಲೆಗಳು ಎಂದರ್ಥ. ಪ್ರಯಾಣದ ಮಧ್ಯೆ ಆಹಾರ ಸಾಮಗ್ರಿ ಮುಗಿದ ಕಾರಣದಿಂದ, ಯೋಧರಿಗೆ ಎಲೆಗಳನ್ನು ತಿನ್ನಬೇಕಾಗಿ ಬಂದಿತ್ತು. ಈ ಘಟನೆ ನಡೆದದ್ದು ಹಿಜರೀ 8ರಲ್ಲಿ ಎಂದು ಇಬ್ನು ಸಅದ್ ಬರೆದಿರುವರು. ಇದು ಹುದೈಬಿಯಾ ಸಂಧಿಯ ಕಾಲವಾಗಿತ್ತು. ಸಿರಿಯಾದಿಂದ ಬರುವ ಖುರೈಶಿಗಳ ಯಾತ್ರಿಕರ ತಂಡವನ್ನು ಕೆಣಕಿ, ಒಪ್ಪಂದ ಮುರಿದರು ಎಂಬ ನೆಪವನ್ನು ಖುರೈಶಿಗಳು ಹೇಳದಿರುವಂತೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಂದಾಲೋಚನೆ ಮಾಡಿ, ಮುನ್ನೆಚ್ಚರಿಕೆಯ ಕ್ರಮವೆಂಬಂತೆ ಪ್ರಸ್ತುತ ಸುರಕ್ಷಾ ಸಂಘವನ್ನು ಸೈಫುಲ್ ಬಹ್ರ್‌ಗೆ ಕಳುಹಿಸಿದ್ದರು.

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಮಕ್ಕಾ ವಿಜಯದಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕವನ್ನು ಪ್ರವೇಶಿಸಿದರು. ಹಝ್ರತ್ ಝುಬೇರ್‌ರನ್ನು ಸೈನ್ಯದ ಒಂದು ಬದಿಯಲ್ಲಿ ಮತ್ತು ಖಾಲಿದ್ ಬಿನ್ ವಲೀದ್‌ರನ್ನು ಸೇನೆಯ ಇನ್ನೊಂದು ಬದಿಯಲ್ಲಿ ನಿಶ್ಚಯಿಸಿದರು. ಕಾಲಾಳು ಸೈನ್ಯದ ಮತ್ತು ಕಣಿವೆಯ ಇಳಿಜಾರು ಪ್ರದೇಶದ ನೇತೃತ್ವವನ್ನು ಹಝ್ರತ್ ಅಬೂ ಉಬೈದರಿಗೆ ವಹಿಸಿಕೊಡಲಾಗಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಹ್ರೈನಿನ ಜನರೊಂದಿಗೆ ಜಿಝ್ಯಾದ ನಿಬಂಧನೆಯೊಂದಿಗೆ ಮೈತ್ರಿ ಮಾಡಿದ್ದರು ಎಂದು ಅಬೂಹುರೈರ(ರ) ವರದಿ ಮಾಡಿರುವರು. ಹಝ್ರತ್ ಅಬೂ ಉಬೈದ ರಝಿಯಲ್ಲಾಹು ಅನ್‌ಹು ಜಿಝ್ಯ ಪಡೆದುಕೊಂಡು ಮರಳಿ ಬಂದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನರೊಡನೆ ಹೇಳಿದರು: ಸಂತೋಷಪಡಿರಿ ಮತ್ತು ನಿಮಗೆ ಉತ್ತಮವಾದುದರಲ್ಲಿ ಪ್ರತೀಕ್ಷೆಹೊಂದಿರಿ. ನಿಮಗೆ ದಾರಿದ್ರ್ಯ ಬರುವುದು ಎಂಬ ಭಯ ನನಗಿಲ್ಲ, ಬದಲಿಗೆ, ಲೌಕಿಕ ಸಂಪತ್ತು ನಿಮಗೆ ಲಭಿಸುವಾಗ, ನೀವು ಅತಿಯಾಗಿ ಲಾಲಸೆ ಪಡುವಿರಿ ಎಂಬುದರ ಬಗ್ಗೆ ನನಗೆ ಹೆದರಿಕೆಯಿದೆ. ಲೌಕಿಕತೆಯಲ್ಲಿ ಮುಳುಗಿ ನಿಮ್ಮನ್ನು ನೀವು ನಾಶಮಾಡುವಿರಿ ಎಂಬ ಭೀತಿ ನನಗಿದೆ.

(ಹುಝೂರ್ ಹೇಳುತ್ತಾರೆ:) ಒಟ್ಟಿನಲ್ಲಿ ಈ ಒಂದು ಮುನ್ನೆಚ್ಚರಿಕೆಯನ್ನು ಪ್ರತಿಯೊಬ್ಬರು ತನ್ನ ಮುಂದಿರಿಸಬೇಕು. ತನ್ನ ಸ್ಥಿತಿಯನ್ನು ಸದಾ ಅವಲೋಕಿಸುತ್ತಿರಬೇಕು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭವಿಷ್ಯ ನುಡಿದಂತೆ, ಸಂಪತ್ತು ಬಂದೇ ಬರುವುದು. ಆದರೆ ನಾವು ಈ ಐಶ್ವರ್ಯದ ಕಾರಣ ನಮ್ಮ ಧಾರ್ಮಿಕತೆಯನ್ನು ಮರೆಯಬಾರದು.

ಹಝ್ರತ್ ಅಬೂಬಕ್ಕರ್(ರ)ರ ದೃಷ್ಟಿಯಲ್ಲಿ ಹಝ್ರತ್ ಅಬೂ ಉಬೈದರ ಪದವಿ ಏನಾಗಿತ್ತೆಂದರೆ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದ ನಂತರ, ಅವರು ಹಝ್ರತ್ ಅಬೂ ಉಬೈದರ ಹೆಸರನ್ನು ಖಿಲಾಫತಿಗಾಗಿ ನಿರ್ದೇಶಿಸಿದ್ದರು. ಅದೇ ರೀತಿಯಲ್ಲಿ ಹಝ್ರತ್ ಉಮರ್(ರ) ತನ್ನ ಮರಣಕ್ಕೆ ಮುಂಚೆ ಹೀಗೆ ಹೇಳಿದ್ದರು: ಹಝ್ರತ್ ಅಬೂ ಉಬೈದ(ರ) ಜೀವಂತವಾಗಿರುತ್ತಿದ್ದರೆ, ಮುಂದಿನ ಖಲೀಫರನ್ನಾಗಿ ಮಾಡಲು, ನಾನು ಅವರ ಹೆಸರು ನಿರ್ದೇಶಿಸುತ್ತಿದ್ದೆ. ಏಕೆಂದರೆ, ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ

ಸಮುದಾಯದ ವಿಶ್ವಸ್ತ ವ್ಯಕ್ತಿಯಾಗಿದ್ದರು. ಹಝ್ರತ್ ಅಬೂಬಕ್ಕರ್(ರ) ಖಲೀಫರಾದಾಗ, ಅವರು ಬೈತುಲ್ ಮಾಲಿನ ಕೆಲಸವನ್ನು ಹಝ್ರತ್ ಅಬೂ ಉಬೈದರಿಗೆ ಒಪ್ಪಿಸಿದ್ದರು. ಹಿಜರೀ 13ರಲ್ಲಿ, ಹಝ್ರತ್ ಅಬೂಬಕ್ಕರ್(ರ) ಹಝ್ರತ್ ಅಬೂ ಉಬೈದರನ್ನು ಸೇನಾಧಿಪತಿಯನ್ನಾಗಿ ಮಾಡಿ ಸಿರಿಯಾದ ಕಡೆಗೆ ಕಳುಹಿಸಿದ್ದರು. ಹಝ್ರತ್ ಅಬೂ ಉಬೈದ ಮೊಟ್ಟಮೊದಲು ಸಿರಿಯಾದ ಪಟ್ಟಣವಾದ ಮಾಬ್‌ನ ಮೇಲೆ ವಿಜಯ ಸಾಧಿಸಿದರು. ಅನಂತರ ಅವರು ಜಾಬಿಯದ ದಿಕ್ಕಿಗೆ ಹೊರಟರು. ಅಲ್ಲಿ ರೋಮನ್ನರ ದೊಡ್ಡ ಸೈನ್ಯ ಹೋರಾಡಲು ತಯಾರಾಗಿ ನಿಂತಿತ್ತು. ಆದ್ದರಿಂದ ಹಝ್ರತ್ ಅಬೂಬಕ್ಕರೊಡನೆ ಹಝ್ರತ್ ಅಬೂ ಉಬೈದ ಹೆಚ್ಚಿನ ಸಹಾಯಕ್ಕಾಗಿ ವಿನಂತಿಸಿದರು. ಹಝ್ರತ್ ಅಬೂಬಕ್ಕರ್(ರ) ಹಝ್ರತ್ ಖಾಲಿದ್ ಬಿನ್ ವಲೀದ್‌ರನ್ನು ಹಝ್ರತ್ ಅಬೂ ಉಬೈದರ ಸೈನ್ಯದ ಅಮೀರರನ್ನಾಗಿ ಮಾಡಿ ಅವರ ಸಹಾಯಕ್ಕಾಗಿ ಕಳುಹಿಸಿದ್ದರು. ಹಝ್ರತ್ ಅಬೂ ಉಬೈದರಿಗೆ ಹಝ್ರತ್ ಖಾಲಿದ್ ಬಿನ್ ವಲೀದ್ ಹೀಗೆ ಪತ್ರವನ್ನು ಬರೆದರು: ನಾನು ಈ ನೇತೃತ್ವವನ್ನು ಆಗ್ರಹಿಸಿರಲಿಲ್ಲ ಮತ್ತು ನನಗೆ ಅದರ ಬಯಕೆಯೂ ಇರಲಿಲ್ಲ. ನಿಮಗೆ ಮೊದಲು ಇದ್ದ ಅದೇ ಸ್ಥಾನ ಈಗಲೂ ಇರುವುದು. ನೀವು ಮುಸ್ಲಿಮರ ಸರದಾರರಾಗಿರುವಿರಿ, ನಿಮ್ಮ ಶ್ರೇಷ್ಠತೆಯನ್ನು ನಾವು ಅಲ್ಲಗಳೆಯುವುದಿಲ್ಲ. ಮಾತ್ರವಲ್ಲ ನಿಮ್ಮ ಸಲಹೆಗಳಿಂದ ನಾವು ವಿಮುಕ್ತರೂ ಅಲ್ಲ.

ಇದೇ ಸತ್ಯವಿಶ್ವಾಸದ ಭವ್ಯತೆಯಾಗಿದೆ. ಎರಡೂ ಕಡೆಯಿಂದ ಯಾವ ರೀತಿಯಲ್ಲಿ ವಿನಯದಿಂದ ಅನುಸರಣೆಯನ್ನು ಪ್ರಕಟಿಸಲಾಯಿತು ಎಂದು ನೋಡಿರಿ! ಅನಂತರ ಮುಸ್ಲಿಮರ ಸೈನ್ಯವು ಸಿರಿಯಾದ ಹಲವು ಪಟ್ಟಣಗಳಾದ ಅಜ್ನಾದೀನ್, ಫಹಲ್, ಡಮಸ್ಕಸ್, ಲಾಝ್‌ಖಿಯ ಮುಂತಾದ ಸ್ಥಳಗಳ ಮೇಲೆ ವಿಜಯ ಸಾಧಿಸಿತು. ಹಝ್ರತ್ ಉಮರ್(ರ) ಖಲೀಫರಾದ ನಂತರ, ಹಝ್ರತ್ ಖಾಲಿದ್ ಬಿನ್ ವಲೀದ್‌ರ ಸೇನಾಧಿಪತಿ ಸ್ಥಾನವನ್ನು ಬದಲಾಯಿಸಿ ಹಝ್ರತ್ ಅಬೂ ಉಬೈದರನ್ನು ಸೇನಾಧಿಪತಿಯನ್ನಾಗಿ ನಿಶ್ಚಯಿಸಿದರು. (ಹುಝೂರ್ ಹೇಳಿದರು:) ಇದರ ಉಳಿದ ಭಾಗವನ್ನು ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು. ಇನ್‌ಶಾಅಲ್ಲಾಹ್.

(ಖುತ್‌ಬದ ಅಂತ್ಯದಲ್ಲಿ ಹುಝೂರ್ ಹೇಳಿದರು:) ಪಾಕಿಸ್ತಾನದ ಅಹ್ಮದಿಯರಿಗಾಗಿ ಈಗ ಅಧಿಕವಾಗಿ ದುಆ ಮಾಡಿರಿ. ಅಲ್ಲಾಹನು ಅವರನ್ನು ಮೌಲವಿಯರ ಮತ್ತು ಆಡಳಿತಗಾರರ ಉಪದ್ರವಗಳಿಂದ ಸುರಕ್ಷಿತಗೊಳಿಸಲಿ. ಅಲ್ಲಿ ಪುನಃ ವಿರೋಧದ ಶಕ್ತವಾದ ಅಲೆಗಳು ಎದ್ದಿವೆ. ಕಾನೂನಿನ ರಕ್ಷಕರು, ನ್ಯಾಯವನ್ನು ತಿಳಿದಿಲ್ಲವೆಂದು ಮಾತ್ರವಲ್ಲ, ಅದನ್ನು ಗಾಳಿಗೆ ತೂರುತ್ತಿದ್ದಾರೆ. ರಾಜಕೀಯ ಸ್ಥಿರತೆ ಬಹುಶಃ ಸಿಗಬಹುದು ಎಂದು ಭಾವಿಸಿಕೊಂಡು ಮೌಲವಿಯರು ಹೇಳುವುದರ ಹಿಂದೆ ಹೋಗುತ್ತಿದ್ದಾರೆ. ಆದರೆ ಇದು ಅವರ ತಪ್ಪು ಗ್ರಹಿಕೆಯಾಗಿದೆ. ಇದೇ ಸಂಗತಿ ಅವರ ವಿನಾಶಕ್ಕೆ ಕಾರಣವಾಗುವುದು ಎಂಬುದನ್ನು ನೆನಪಿಡಲಿ. ನಾವಂತು ಹಿಂದಿನಿಂದಲೇ ಈ ಕಷ್ಟತೆಗಳಿಂದ ಸಾಗುತ್ತಾ ಬಂದಿದ್ದೇವೆ. ಈಗಲೂ ಅಲ್ಲಾಹನ ಸಹಾಯದಿಂದ ಇವುಗಳನ್ನು ದಾಟುವೆವು – ಇನ್‌ಶಾಅಲ್ಲಾಹ್. ಆದರೆ, ಇವರು ತಮ್ಮ ದುರ್ವರ್ತನೆಗಳಿಂದ ಹಿಂದೆ ಸರಿಯದಿದ್ದರೆ, ಇವರ ನಾಶ ಖಚಿತವಾದುದಾಗಿದೆ. ಆದ್ದರಿಂದ ಅಹ್ಮದಿಯರು ತುಂಬಾ ದುಆ ಮಾಡಿರಿ. ಅಲ್ಲಾಹನು ಈ ಪ್ರಯಾಸಗಳನ್ನು ನೀಗಿಸಲಿ. ಪಾಕಿಸ್ತಾನದ ಅಹ್ಮದಿಯರು ವಿಶೇಷವಾಗಿ ಮತ್ತು ಹೊರಗಿನ ಅಹ್ಮದಿಯರು ಸಹ ಅಲ್ಲಾಹನೊಂದಿಗೆ ತಮ್ಮ ಸಂಬಂಧವನ್ನು ವರ್ಧಿಸಬೇಕು. ಅಲ್ಲಾಹನ ಸಹಾಯ ಮತ್ತು ನೆರವು ಬೇಗನೆ ಬರುವಂತಾಗಲಿ ಮತ್ತು ಈ ಸಂಕಷ್ಟಗಳಿಂದ ಅಲ್ಲಿರುವ ಅಹ್ಮದಿಯರು ಮುಕ್ತಿ ಪಡೆಯಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 02-10-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon